
ಪುಸ್ತಕ ಪರಿಚಯ

# ಸ್ವಾಮಿ ನಿತ್ಯಸ್ಥಾನಂದರ 'ಶೈಕ್ಷಣಿಕ ಶ್ರೇಷ್ಠತೆಯತ್ತ' (Towards Teaching Excellence)

ಶಿಕ್ಷಣ ಎನ್ನುವುದು ಒಂದು ವೃತ್ತಿಗಿಂತ ಮಿಗಿಲಾಗಿ ಒಂದು ಧ್ಯೇಯ - ಸಮಾಜದ ಯೋಗಕ್ಷೇಮ, ಅಭ್ಯುದಯಗಳ ದಿಶೆಯಲ್ಲಿ, ಅಧ್ಯಾತ್ಮ, ತತ್ತ್ವಜ್ಞಾನ, ದೇಶಭಕ್ತಿಗಳ ಮುಪ್ಪುರಿಯಾದ ಸ್ವಾಮಿ ವಿವೇಕಾನಂದರು ನಿಜವಾದ, ಅರ್ಥಪೂರ್ಣವಾದ ಶಿಕ್ಷಣದ ಮತ್ತು ಅದರ ಪ್ರಸ್ತುತತೆಯ ಹಾಗೂ ಸಾಮಾಜಿಕ-ಸಾಂಸ್ಕೃತಿಕ ಅನ್ವಯದ ಅತ್ಯುನ್ನತ ಪ್ರತಿಪಾದಕರಾಗಿದ್ದರು.

ರಾಮಕೃಷ್ಣ ಮಠದ ಶ್ರೇಷ್ಠ ವಿದ್ವಾಂಸರೂ, ಚಿಂತಕರೂ ಆದ ಸ್ವಾಮಿ ನಿತ್ಯಸ್ಥಾನಂದರು ಶಿಕ್ಷಣದ ಮತ್ತು ವಿದ್ವತ್ತಿನ ಕ್ಷೇತ್ರದ ಸವಾಲುಗಳಿಗೆ ಈ ಕೃತಿಯಲ್ಲಿ ಉತ್ತರಿಸಿ, ಶಿಕ್ಷಣ ಸಂಬಂಧವಾದ ವಿವೇಕಾನಂದರ ಚಿಂತನಗಳನ್ನು ಸಂಗ್ರಹವಾಗಿ ನಿರೂಪಿಸಿ, ಶಿಕ್ಷಕರು ಸಮರ್ಪಕ ದೃಷ್ಟಿಕೋನಗಳನ್ನೂ ಮೌಲ್ಯಗಳನ್ನೂ ಬೆಳೆಸಿಕೊಳ್ಳುವ ಅಗತ್ಯ ಹಾಗೂ ವಿಧಾನಗಳತ್ತ ವಾಚಕರ ಮನಸ್ಸನ್ನು ತಿರುಗಿಸುತ್ತಾರೆ.




**ಕೃತಿ:** Towards Teaching Excellence
**ಲೇಖಕರು :** ಸ್ವಾಮಿ ನಿತ್ಯಸ್ಥಾನಂದ
**ಪ್ರಕಾಶನ :** Ramakrishna Math, Mylapore, Chennai 600 004
**ಪುಟ:** 136 **ಬೆಲೆ :** 60

## ೧. ಶಿಕ್ಷಣವನ್ನು ಕುರಿತು ಸ್ವಾಮಿ ವಿವೇಕಾನಂದರು

(೧) **ಪೀಠಿಕೆ:** ಸ್ಥೂಲವಾಗಿ ಹೇಳುವುದಾದರೆ, ಶಿಕ್ಷಣಕ್ಕೆ ಎರಡು ಮುಖಗಳು: ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ. ಮೊದಲನೆಯದು ಬಾಹ್ಯಜಗತ್ತಿಗೆ ಸಂಬಂಧಿಸಿದ್ದು, ಶಾಲೆ ಕಾಲೇಜುಗಳಲ್ಲಿ ಕಲಿಸುವ ಶೈಕ್ಷಣಿಕ ವಿಷಯಗಳನ್ನು ಒಳಗೊಳ್ಳುತ್ತದೆ; ಎರಡನೆಯದು ಮಾನವ ಜೀವಿಗಳನ್ನೇ ಕುರಿತ ಅಧ್ಯಯನವಾಗಿದೆ. ಮಾನವ ಜೀವಿ ಎಂದರೆ ಯಾರು? ಅವನ(ಳ) ವ್ಯಕ್ತಿತ್ವದ ವಿವಿಧ ಆಯಾಮಗಳು ಯಾವುವು? ಚಾರಿತ್ರ್ಯವನ್ನು ಬೆಳೆಸಿಕೊಳ್ಳುವುದು ಹೇಗೆ? ಇತರರೊಡನೆ ಸಾಮರಸ್ಯದಿಂದ ಬಾಳುವುದು ಹೇಗೆ? ಇವು ವ್ಯಕ್ತಿ ನಿಷ್ಠ ಶಿಕ್ಷಣದ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲವು ಪ್ರಶ್ನೆಗಳು.

ಸ್ವಾಮಿ ವಿವೇಕಾನಂದರು ಶಿಕ್ಷಣದ ಈ ಎರಡು ಮುಖಗಳ ಸ್ವಷ್ಟ ಸಮನ್ವಯವನ್ನು ಬಯಸಿದರು. ಶಿಕ್ಷಣ ಸಮಾಜದ ಎಲ್ಲ ವರ್ಗಗಳನ್ನೂ ತಲುಪಬೇಕು. ದೇಹಕ್ಕೆ ಕಾಯಿಲೆಯಾದಾಗ ಆರೋಗ್ಯವನ್ನು ಮತ್ತೆ ಗಳಿಸಲು ಔಷಧ ತೆಗೆದುಕೊಳ್ಳಬೇಕು. ಹಾಗೆಯೆ, ಸಮಾಜಕ್ಕೆ ಕಾಯಿಲೆಯಾದಾಗ, ಅದು ಶಿಕ್ಷಣ ಎಂಬ ಔಷಧವನ್ನು ಸೇವಿಸಬೇಕು. ದೇಹದ ಯಾವುದೋ ಒಂದು ಭಾಗವನ್ನಷ್ಟೆ ಸದೃಢಗೊಳಿಸುವುದರಿಂದ ಇಡೀ ಶರೀರ ಆರೋಗ್ಯಶಾಲಿಯಾಗುವುದಿಲ್ಲ. ಅಂತೆಯೆ ಸಮಾಜದ ನಿರ್ದಿಷ್ಟ ಭಾಗಗಳಿಗೆ ಶಿಕ್ಷಣವನ್ನು ಸೀಮಿತಗೊಳಿಸುವುದರಿಂದ ಇಡೀ ಸಮಾಜ ಸ್ವಸ್ಥವಾಗುವುದಿಲ್ಲ. ಏಕೆಂದರೆ, ಸುಶಿಕ್ಷಿತ್ತರಾದ ಕೆಲವರು ಉಳಿದವರನ್ನು ಶೋಷಿಸುತ್ತಾರೆ. ಅಂತಿಮವಾಗಿ ಇಡೀ ಸಮಾಜಕ್ಕೆ ಹಾನಿಯಾಗುತ್ತದೆ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಪ್ರತಿಯೊಬ್ಬರಿಗೂ, ಅದರಲ್ಲೂ ಹಿಂದುಳಿದವರಿಗೆ ಶಿಕ್ಷಣ ಬೇಕೆಂದು ಒತ್ತಿ ಹೇಳುತ್ತಾರೆ. ಅವರು ಪ್ರತಿಪಾದಿಸಿದ ಶಿಕ್ಷಣದ ಬಗೆ ಹೀಗಿದೆ: (೨) ಸ್ವ-ಅಭಿವೃದ್ಧಿ ಗಾಗಿ ಶಿಕ್ಷಣ (೩) ಸ್ವ- ಸಮೃದ್ಧಿ ಗಾಗಿ ಶಿಕ್ಷಣ (೪) ಆತ್ಮಗೌರವಕ್ಕಾಗಿ ಶಿಕ್ಷಣ (೫) ಆತ್ಮವಿಶ್ವಾಸಕ್ಕಾಗಿ ಶಿಕ್ಷಣ(೬) ಸ್ವಾವಲಂಬನೆಗಾಗಿ ಶಿಕ್ಷಣ (೭) ಆತ್ಮಸಂಯಮಕ್ಕಾಗಿ ಶಿಕ್ಷಣ (೮) ಸ್ವ-ಜವಾಬ್ದಾರಿಗಾಗಿ ಶಿಕ್ಷಣ (೯)ಆತ್ಮ ಪರಿಪೂರ್ಣತೆಗಾಗಿ ಶಿಕ್ಷಣ. ಶಿಕ್ಷಣದ ಬಗೆಗಿನ ಸ್ವಾಮಿ ವಿವೇಕಾನಂದರ ಪರಿಕಲ್ಪನೆಯ ಕೆಲವು ಮುಖ್ಯಾಂಶಗಳು:

೧. ಜ್ಞಾನವನ್ನು ಜೀರ್ಣಿಸಿಕೊಳ್ಳುವುದು; ಮಾಹಿತಿ ಸಂಗ್ರಹ ವಲ್ಲ. ೨. ಆಂತರಿಕ ಶಕ್ತಿಗಳ ಅಭಿವ್ಯಕ್ತಿ ೩. ತನ್ನನ್ನು ಹಾಗೂ ರಾಷ್ಟ್ರೀಯ ಸಂಸ್ಕೃತಿಯನ್ನು ಕುರಿತು ಗೌರವ ಮೂಡಿಸುವುದು. ೪. ಆತ್ಮವಿಶ್ವಾಸದ ಜಾಗೃತಿ ೫. ಸ್ವಾವಲಂಬನೆಗೆ ಸಿದ್ಧತೆ ೬. ಜವಾಬ್ದಾರಿಯುತ ಪ್ರಜೆಗಳ ಸೃಷ್ಟಿ. ೭. ಸೇವಾಮನೋಧರ್ಮವನ್ನು ಬೆಳೆಸವುದು ೮. ವ್ಯಕ್ತಿತ್ವವನ್ನು ಪವಿತ್ರ ರೀತಿಯಲ್ಲಿ ಬೆಳೆಸುವುದು.

**೨. ಆದರ್ಶವೊಂದರ ಅಗತ್ಯ :**

೧) ಅರ್ಥಪೂರ್ಣ ಜೀವನಕ್ಕೊಂದು ಆದರ್ಶ. ೨) ತಕ್ಕ ಆದರ್ಶವೊಂದನ್ನು ಕಂಡುಕೊಳ್ಳುವುದು ೩) ಜೀವಂತ ನಿದರ್ಶನಗಳ ಆವಶ್ಯಕತೆ.

**೩. ಮೂರು ಬಗೆಯ ಶಿಕ್ಷಕರು:**

೧) ಸಾಮಾನ್ಯ ಶಿಕ್ಷಕರು ೨) ಒಳ್ಳೆಯ ಶಿಕ್ಷಕರು ೩) ಅತ್ಯುತ್ತಮ ಶಿಕ್ಷಕರು ೪) ಅತ್ಯುತ್ತಮ ರೀತಿಯಲ್ಲಿ ಕಲಿಸುವವರು.

**೪. ಪ್ರೀತಿಯ ಮೂರು ಬಗೆಗಳು:**

೧) ವೃತ್ತಿಯ ಬಗೆಗೆ ಪ್ರೀತಿ ೨) ವಿಷಯದ ಬಗೆಗೆ ಪ್ರೀತಿ ೩) ವಿದ್ಯಾರ್ಥಿಗಳ ಬಗೆಗಿನ ಪ್ರೀತಿ ೪) ಪ್ರೀತಿಯ ಈ ಪ್ರಕಾರಗಳೊಡನೆ ಕಲಿಸುವುದು.

**೫. ಶಿಕ್ಷಣದ ಮೂರು ಕೋನಗಳು:**

೧) ಸಂವೇದನ ೨) ಭಾವ ೩) ಸಂಕಲ್ಪ

**೬. ನೀತಿಗಳನ್ನು ಬೋಧಿಸುವ ವಿಧಾನ :**

೧) ಪರಿಸರವೊಂದನ್ನು ಸೃಜಿಸುವುದು ೨) ಮೌಲ್ಯಗಳನ್ನು ಪರಿಣಾಮಕಾರಿಯಾಗಿ ನೀಡುವುದು.

**೭. ಆಧ್ಯಾತ್ಮಿಕ ಶಿಕ್ಷಣ**

ದೈವೀ ಮನೋಭಾವ ಎಲ್ಲ ಉನ್ನತ ಮೌಲ್ಯಗಳ ಆಕರ. ಅದು ದೇಹ, ಇಂದ್ರಿಯಗಳ ಮತ್ತು ಮನಸ್ಸಿನ ಆಚೆ ನಮ್ಮ ವ್ಯಕ್ತಿತ್ವದ ಸಾರ. ದಿವ್ಯತೆ ನಮ್ಮ ಬದುಕಿನ ತಿರುಳು. ಹಣ ಇತ್ಯಾದಿಗಳಿಗೆ ಅವುಗಳದೇ ಆದ ಉಪಯೋಗವಿದೆ; ಆದರೆ ನಮ್ಮ ಬದುಕುಗಳ ಅತ್ಯಂತ ಸಾರವತ್ತಾದ ಭಾಗವನ್ನು ಅಲಕ್ಷಿಸಿ, ಅವುಗಳಲ್ಲಿ ಮಗ್ನವಾಗುವುದು ದಿಟವಾಗಿಯೂ ಅರ್ಥಹೀನ. ಎಲ್ಲಕ್ಕಿಂತ ಮೊದಲನೆಯದಾಗಿ, ನಾವು ನಮ್ಮ ಬದುಕುಗಳ ಹುರುಳನ್ನು ಮುಟ್ಟಲು ಯತ್ನಿಸಬೇಕು; ಉಳಿದವು ಆಮೇಲೆ ಸಹಜವಾಗಿ ಹೊಂದಿಕೊಳ್ಳುತ್ತವೆ. ಆದ್ದರಿಂದ, ಸ್ವಾಮಿ ವಿವೇಕಾನಂದರು ಹೇಳುತ್ತಾರೆ:

‘‘ನಿಮ್ಮೊಳಗಿನ ದಿವ್ಯತೆಯನ್ನು ಹೊರಹೊಮ್ಮಿಸಿ; ಎಲ್ಲವೂ ಅದರ ಸುತ್ತ ಸಾಮರಸ್ಯಪೂರ್ಣವಾಗಿ ವ್ಯವಸ್ಥೆಗೊಳ್ಳುವುದು.’’

ಶೈಕ್ಷಣಿಕ ಉತ್ಕೃಷ್ಟತೆಯನ್ನು ಸಾಧಿಸುವಲ್ಲಿ ಕ್ರಮಬದ್ಧ ತರಬೇತಿ ಪಶ್ಚಿಮದಲ್ಲಿ ಪ್ರಾಮುಖ್ಯತೆಯನ್ನು ಪರಿಣಾಮಕತೆಯನ್ನೂ ಗಳಿಸಿದೆ; ಅದು ಭಾರತದಲ್ಲಿ ದೊಡ್ಡ ಪ್ರಮಾಣದಲ್ಲಿ ಕಾಣಿಸಿಕೊಳ್ಳಬೇಕಾಗಿದೆ. ಈ ಪುಸ್ತಕ ವರ್ತಮಾನದಲ್ಲಿ ಶೈಕ್ಷಣಿಕ ಶ್ರೇಷ್ಠತೆಯನ್ನು ಸಾಧಿಸಲು ಮತ್ತು ಮುಂದಿನ ಪೀಳಿಗೆ ಸಾಮಾಜಿಕ ಶ್ರೇಷ್ಠತೆಯತ್ತ ಪರಿಶ್ರಮಿಸಲು ನೆರವಾಗುತ್ತದೆ.

ಸ್ವಾಮೀಜಿ ಅಭಿನಂದನೀಯರು.

*— ಡಾ. ಸಿ.ಪಿ.ಕೆ.*

## ‘ತಸ್ಮಿನ್ ತುಷ್ಟೇ ಜಗತ್ ತುಷ್ಟಃ’

‘‘ನಾವು ಆಹಿರಿತೋಲ ಘಾಟ್‌ಗೆ ತೆರಳಿ ಅಲ್ಲಿಂದ ದೋಣಿಯಲ್ಲಿ ದಕ್ಷಿಣೇಶ್ವರಕ್ಕೆ ಹಿಂದಿರುಗಿದೆವು. ಆಗ ಮಧ್ಯಾಹ್ನ ಒಂದೂವರೆ ಗಂಟೆ. ಯಾರೂ ಏನೂ ತಿಂದಿರಲಿಲ್ಲ. ಶ್ರೀರಾಮಕೃಷ್ಣರಿಗೂ ತುಂಬ ಹಸಿವೆಯಾಗಿತ್ತು. ಅವರು ಹತ್ತಿರದ ಮಾರುಕಟ್ಟೆಯಿಂದ ಸ್ವಲ್ಪ ಸಿಹಿತಿಂಡಿ ತರುವಂತೆ ನನಗೆ ಹೇಳಿದರು. ಗೋಲಪ್-ಮಾ ತನ್ನಲ್ಲಿದ್ದ ನಾಲ್ಕು ಕಾಸನ್ನು ಕೊಟ್ಟಳು. ನಾನು ಬೇಗನೆ ಹೋಗಿ ಕೆಲವು ಚಾನಾರ್ ಮುರ್ಕಿ (ಸಣ್ಣ ಸಿಹಿ ಉಂಡೆಗಳು) ಗಳನ್ನು ತಂದೆ. ಶ್ರೀರಾಮಕೃಷ್ಣರು ಸಂತೋಷದಿಂದ ನನ್ನ ಕೈಯಲ್ಲಿದ್ದ ತಿಂಡಿಯ ಪೊಟ್ಟಣವನ್ನು ತೆಗೆದುಕೊಂಡು ಎಲ್ಲವನ್ನೂ ತಿಂದರು. ಅನಂತರ ಅವರು ಖಾಲಿ ಪೊಟ್ಟಣವನ್ನೆಸೆದು, ಬೊಗಸೆಯಿಂದ ಗಂಗೆಯ ನೀರನ್ನು ಮೊಗೆದು ಕುಡಿದರು. ಅವರಿಗೆ ತೃಪ್ತಿಯಾಯಿತು. ಆದರೆ ನಾವು ಮೂರು ಜನರೂ ಹಸಿದಿರುವೆವು ಎಂಬುದು ಅವರಿಗೆ ಗೊತ್ತಿತ್ತು; ಆದರೂ ಸಿಹಿತಿಂಡಿಯನ್ನು ನಮಗೆ ಕೊಡದೆ ತಾವೆ ತಿಂದುಬಿಟ್ಟದ್ದು ಏಕೆಂದು ಆಶ್ಚರ್ಯಪಡುತ್ತಿರುವಷ್ಟರಲ್ಲಿಯೇ ನಮ್ಮೆಲ್ಲರ ಹೊಟ್ಟೆಗಳೂ ತುಂಬಿಹೋದವು! ನಾವು ಮೌನವಾಗಿ ಒಬ್ಬರನ್ನೊಬ್ಬರು ನೋಡಿದೆವು. ಅನಂತರ ಶ್ರೀರಾಮಕೃಷ್ಣರು ನಕ್ಕು ಚಿಕ್ಕ ಹುಡುಗನ ಹಾಗೆ ತಮಾಷೆಯಾಗಿ ಮಾತನಾಡತೊಡಗಿದರು. ನಾವು ಒಂದು ಪವಾಡ ನಡೆದುಹೋಯಿತೆಂದು ತೀರ್ಮಾನಿಸಿಕೊಂಡೆವು. ಇಂತಹುದೇ ಒಂದು ಘಟನೆ ಕೃಷ್ಣನ ಜೀವಿತದ ದಿವ್ಯಲೀಲಾನಾಟಕದಲ್ಲಿಯೂ ನಡೆಯಿತು. ಪಂಚಪಾಂಡವರು ವನವಾಸದಲ್ಲಿದ್ದಾಗ, ದೂರ್ವಾಸ ಮಹರ್ಷಿ ತನ್ನ ಹನ್ನೆರಡು ಸಾವಿರ ಶಿಷ್ಯರೊಂದಿಗೆ ಅವರಿದ್ದ ಪರ್ಣಕುಟಿಗೆ ಹೋಗಿ ತಮಗೆಲ್ಲ ಭೋಜನವಾಗಬೇಕೆಂದು ಕೇಳಿದನು. ಅಸಹಾಯಕಿ ಯಾದ ದ್ರೌಪದಿ ತನ್ನನ್ನು ಈ ಪರಿಸ್ಥಿತಿಯಿಂದ ಪಾರುಮಾಡಬೇಕೆಂದು ಕೃಷ್ಣನನ್ನು ಕರೆದಳು. ಕೃಷ್ಣನು ಬಂದು ತನಗೂ ಹಸಿವೆಯಾಗಿದೆ ಏನಾದರೂ ಕೊಡು ಎಂದು ಕೇಳಿದನು. ಪರ್ಣಕುಟಿಯಲ್ಲಿ ಅಡುಗೆ ಪಾತ್ರೆಯ ತಳದಲ್ಲಿ ಹತ್ತಿಕೊಂಡಿದ್ದ ಒಂದೆರಡು ಅಗಳನ್ನೇ ತಿಂದು ಕೃಷ್ಣನು ತೇಗಿದನು. ತಕ್ಷಣ ದೂರ್ವಾಸನ ಮತ್ತು ಅವನ ಶಿಷ್ಯರೆಲ್ಲರ ಹೊಟ್ಟೆಗಳೂ ತುಂಬಿಹೋದವು. ಭಗವಂತನು ತೃಪ್ತನಾದರೆ ಇಡೀ ಜಗತ್ತಿಗೇ ತೃಪ್ತಿಯಾದಂತೆ ಎಂಬ ಸತ್ಯ ಈಗ ನನಗೆ ಚೆನ್ನಾಗಿ ಮನದಟ್ಟಾಯಿತು.’’ *— ಸ್ವಾಮಿ ಅಭೇದಾನಂದ*